ಬೆವಿಕಂ
BESCOM

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಖ್ಯೆ: ಮುಇ(ವಿ)/ಬೆಂಉವ/ಅಇ(ವಿ)/ಸಕಾನಿಇ(ವಿ)–2/18–19
ಲಗತ್ತು:

599-602

ಮುಖ್ಯ ಇಂಜಿನಿಯರ್ (ವಿ) ರವರ ಕಛೇರಿ,
ಬೆವಿಕಂ ಬೆಂ.ಮ.ಕ್ಷೇ. ಉತ್ತರ ವಲಯ,
#8, ನಂದಿದುರ್ಗ ರಸ್ತೆ,
ಬೆನ್‌ಸನ್ ಟೌನ್, ಬೆಂಗಳೂರು–46.
ಇ–ಮೇಲ್: ceenz@bescom.co.in
cebmaznorth@gmail.com

ದಿನಾಂಕ: 20 JUN 2018

ಗೆ,

ಶ್ರೀ ಜಾಹಿದ್ ಹುಸೇನ್ ಪವರ್ ಆಫ್ ಅಟರ್ನಿ ಮೆ.ಶೋಭ ಲಿಮಿಟೆಡ್,
ಸ.ನಂ.50,51 ಮತ್ತು 54,ಬೆಲ್ಲಹಳ್ಳಿ ಗ್ರಾಮ,
ಯಲಹಂಕ ಹೋಬಳಿ, ಬೆಂಗಳೂರು.

ಮಾನ್ಯರೇ,

ವಿಷಯ: ಶಿವಾಜಿನಗರ ವಿಭಾಗದ, ಇ–9 ಉಪವಿಭಾಗ ವ್ಯಾಪ್ತಿಯ ಬೆಂಗಳೂರು ಉತ್ತರ ತಾಲ್ಲೂಕಿನ ಯಲಹಂಕ ಹೋಬಳಿ, ಬೆಲ್ಲಹಳ್ಳಿ ಗ್ರಾಮದ ಸ.ನಂ.50,51 ಮತ್ತು 54 ರಲ್ಲಿ ಶ್ರೀ ಜಾಹಿದ್ ಹುಸೇನ್ ಪವರ್ ಆಫ್ ಅಟರ್ನಿ ಮೆ.ಶೋಭ ಲಿಮಿಟೆಡ್ ರವರು ನಿರ್ಮಿಸಲುದ್ದೇಶಿಸಿರುವ ವಸತಿ ಮತ್ತು ವಾಣಿಜ್ಯ ಬಹುಮಹಡಿ ಕಟ್ಟಡಕ್ಕೆ ಒಟ್ಟು 7380 ಕೆವಿಎ ವಿದ್ಯುತ್ ಸಂಪರ್ಕವನ್ನು ನೀಡುವ ಸಂಬಂಧ ನಿರಾಕ್ಷೇಪಣಾ ಪತ್ರವನ್ನು ನೀಡಲು ಅನುಮೋದನೆ ಕೋರಿ ಸಲ್ಲಿಸಿರುವ ಪ್ರಸ್ತಾವನೆಯ ಕುರಿತು.

ಉಲ್ಲೇಖ: 1. ಪತ್ರ ಸಂ: ಬಿಸಿ–18/ಮುಪ್ರವ್ಯ(ಕಾ)/ಉಪ್ರವ್ಯ–3/ಸಪ್ರವ್ಯ–1/ಕ–533(124)/17–18/1120 ದಿ:18.05.2018, ಮುಖ್ಯ ಪ್ರಧಾನ ವ್ಯವಸ್ಥಾಪಕರು(ವಿ), ಅಪರೇಷನ್ಸ್ ,ಬೆ.ವಿ.ಕಂ
2. ಪತ್ರ ಸಂ: CEE/BMANZ/SE (O)/AEE/17-18/557-58 dtd: 01.03.2018.
3. ಪತ್ರ ಸಂ: CGM (OP)/DGM-3/AGM-1/BC-18/F-533(124)/17-18/13-14 dtd: 02.04.2018 of CGM (Ele), Operations, BESCOM.
4. ಪತ್ರ ಸಂ: EEE/HBL/AEE/F-29/18-19/51-52 dtd: 11.04.2018
5. Approved by Hon'ble DT BESCOM dated: 26.04.2018

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶಿವಾಜಿನಗರ ವಿಭಾಗದ, ಇ–9 ಉಪವಿಭಾಗ ವ್ಯಾಪ್ತಿಯ ಬೆಂಗಳೂರು ಉತ್ತರ ತಾಲ್ಲೂಕಿನ ಯಲಹಂಕ ಹೋಬಳಿ, ಬೆಲ್ಲಹಳ್ಳಿ ಗ್ರಾಮದ ಸ.ನಂ.50,51 ಮತ್ತು 54 ರಲ್ಲಿ ಶ್ರೀ ಜಾಹಿದ್ ಹುಸೇನ್ ಪವರ್ ಆಫ್ ಅಟರ್ನಿ ಮೆ. ಶೋಭ ಲಿಮಿಟೆಡ್ ರವರು ನಿರ್ಮಿಸಲುದ್ದೇಶಿಸಿರುವ ವಸತಿ ಮತ್ತು ವಾಣಿಜ್ಯ ಬಹುಮಹಡಿ ಕಟ್ಟಡಕ್ಕೆ ಒಟ್ಟು 7380 ಕೆವಿಎ ವಿದ್ಯುತ್ ಸಂಪರ್ಕವನ್ನು ನೀಡುವ ಸಂಬಂಧ ನಿರಾಕ್ಷೇಪಣಾ ಪತ್ರವನ್ನು ನೀಡುವ ಪ್ರಸ್ತಾವನೆಗೆ ಮುಖ್ಯ ಪ್ರಧಾನ ವ್ಯವಸ್ಥಾಪಕರು(ವಿ), ಅಪರೇಷನ್ಸ್ ,ಬೆ.ವಿ.ಕಂ. ರವರು ಉಲ್ಲೇಖ(1) ರ ಪತ್ರದಲ್ಲಿ ಅನುಮೋದನೆ ನೀಡಿರುವಂತೆ ಮತ್ತು ಕಾರ್ಯನಿರ್ವಾಹಕ ಇಂಜಿನಿಯರ್(ವಿ) 220 ಕೆವಿ ಹೆಬ್ಬಾಳ ವಿಭಾಗ ಕವಿಪ್ರನಿನಿ ರವರು ಉಲ್ಲೇಖ (4) ರಲ್ಲಿ ನೀಡಿರುವ ಕಾರ್ಯಸಾಧ್ಯತಾವರದಿಯನ್ನು ಪರಿಗಣಿಸಿ ಈ ಕೆಳಕಂಡ ನಿಬಂಧನೆಗೆ ಒಳಪಟ್ಟು ಅನುಮೋದನೆ ನೀಡಲಾಗಿದೆ.

1. ಭಾವಿ ಗ್ರಾಹಕರು ತಮ್ಮ ಉದ್ದೇಶಿತ ವಸತಿ ಮತ್ತು ವಾಣಿಜ್ಯ ಬಹುಮಹಡಿ ಕಟ್ಟಡಕ್ಕೆ ಒಟ್ಟು 7380ಕೆವಿಎ ನಿಯತ ವಿದ್ಯುತ್ ಸಂಪರ್ಕವನ್ನು ಪಡೆಯುವ ಸಂಬಂಧ, ನಿರ್ಮಾಣ ಹಂತದಲ್ಲಿರುವ 66/11ಕೆ.ವಿ ಶೋಭ ಸಿಟಿ ವಿದ್ಯುತ್ ಉಪಕೇಂದ್ರದಲ್ಲಿ ನೂತನ 11 ಕೆ.ವಿ ಬ್ರೇಕರ್ ನ್ನು ಅಳವಡಿಸಿ ಅಲ್ಲಿಂದ ಮುಂದಕ್ಕೆ ನೂತನ 11ಕೆ.ವಿ ಮಾರ್ಗವನ್ನು 3*400ಚ.ಮಿ.ಮೀ ಭೂಗತ ಕೇಬಲ್‌ನೊಂದಿಗೆ ತಮ್ಮ ಆವರಣದವರೆಗೆ ಸುಮಾರು 4.5 ಕಿ.ಮೀ.ಗಳಷ್ಟು ದೂರ ವಿಸ್ತರಿಸಿಕೊಳ್ಳುವುದು ಹಾಗೂ ಕೇಬಲ್ ಮಾರ್ಗದಲ್ಲಿ 3 ಸಂಖ್ಯೆಯ ಇಂಟರ್ ಪೋಸಿಂಗ್ ಆರ್‌ಎಂಯುಗಳನ್ನು ಅಳವಡಿಸುವುದು.
2. ಸದರಿ ನಿರಾಕ್ಷೇಪಣಾ ಪತ್ರದ ಸಿಂಧುತ್ವದ ಅವಧಿಯು ಅನುಮೋದನೆ ನೀಡಿದ ದಿನದಿಂದ 2 ವರ್ಷಗಳಿಗೆ ಮಾತ್ರ ಸೀಮಿತವಾಗಿದ್ದು, ವಿದ್ಯುತ್ ಸರಬರಾಜು ಮಾಡಲು ಮಂಜೂರಾತಿ ನೀಡುವ ಅವಧಿಯಲ್ಲಿ ನಿಯತ ವಿದ್ಯುತ್ ಸರಬರಾಜು ವ್ಯವಸ್ಥೆ ಕುರಿತು ಪರಿಶೀಲಿಸಲಾಗುವುದು.

3. ಭವಿಷ್ಯದಲ್ಲಿ ಭಾವಿ ಗ್ರಾಹಕರ ಕೋರಿಕೆಯು 7500ಕೆ.ವಿ.ಎ ಮೀರಿದಲ್ಲಿ ತಮ್ಮ ಆವರಣದಲ್ಲಿ ಸ್ವಯಂಕಾರ್ಯನಿರ್ವಹಣಾ ಯೋಜನೆಯಡಿ 66/11ಕೆ.ವಿ ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸಿಕೊಳ್ಳುವುದು.

4. ಈ ನಿರಾಕ್ಷೇಪಣಾ ಪತ್ರದಿಂದ ಬರುವ ಯಾವುದೇ ಭಾದ್ಯತೆಗಳಿಗೆ ಬೆವಿಕಂ ಜವಾಬ್ದಾರಿಯಾಗಿರುವುದಿಲ್ಲ.

5. ಭಾವಿ ಗ್ರಾಹಕರ ಆವರಣದಲ್ಲಿ ಯಾವುದೇ ಬೆವಿಕಂ/ಕೆಪಿಟಿಸಿಎಲ್ ವಿದ್ಯುತ್ ಮಾರ್ಗಗಳು ಹಾದು ಹೋಗುತ್ತಿದಲ್ಲಿ ಅವುಗಳನ್ನು ಭಾವಿ ಗ್ರಾಹಕರೇ ಬೆವಿಕಂ ನಿಯಮಗಳಿಗೆ ಅನುಸಾರವಾಗಿ ತಮ್ಮ ಸ್ವಂತ ಖರ್ಚಿನಲ್ಲಿ ಸ್ಥಳಾಂತರಗೊಳಿಸುವುದು.

6. ಮೇಲ್ಕಂಡ ಭಾವಿ ಗ್ರಾಹಕರ ಆವರಣದಲ್ಲಿ, ಮುಂಬರುವ ದಿನಗಳಲ್ಲಿ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸುವಾಗ ಭಾವಿ ಗ್ರಾಹಕರು ಹಾಲಿ ಚಾಲ್ತಿಯಲ್ಲಿರುವ ಕರ್ನಾಟಕ ಕೆ.ಇ.ಆರ್.ಸಿ ನಿಬಂಧನೆಗಳನ್ನು ಮತ್ತು ವಿದ್ಯುತ್ ಸರಬರಾಜು ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದು.

7. ಮೇಲ್ಕಂಡ ಆವರಣದಲ್ಲಿ ಬರುವ ವಿವಿಧ ಕಟ್ಟಡಗಳಿಗೆ ಬೆವಿಕಂ ನಿಯಮಗಳಿಗೆ ಅನುಸಾರವಾಗಿಯೇ ವಿದ್ಯುತ್ ಸಂಪರ್ಕವನ್ನು ಒದಗಿಸಲಾಗುವುದು.

8. ಈ ನಿರಾಪೇಕ್ಷಣಾ ಪತ್ರವನ್ನು ಭಾವಿ ಗ್ರಾಹಕರು ಬಿಡಿಎ/ಬಿಬಿಎಂಪಿ ಅಥವಾ ತತ್ಸಂಬಂಧ ಇಲಾಖೆಗಳಿಂದ ಬಹುಮಹಡಿ ಕಟ್ಟಡದ ಮಂಜೂರಾತಿ ನಕ್ಷೆ ಪಡೆಯಲು ನೀಡಲಾಗಿದೆ ವಿನಹ ಬೆವಿಕಂ ಯಾವುದೇ ವಿದ್ಯುತ್ ಮಂಜೂರಾತಿ ನೀಡಲು ಬದ್ಧರಾಗಿರುವುದಿಲ್ಲ. ವಿದ್ಯುತ್ ಕೋರಿಕೆಯನ್ನು ಆ ವೇಳೆಯಲ್ಲಿ ತಾಂತ್ರಿಕ ಕಾರ್ಯ ಸಾಧ್ಯತೆಯನ್ನು ಪರಿಶೀಲಿಸಿ ನೀಡಲಾಗುವುದು.

ತಮ್ಮ ವಿಶ್ವಾಸಿ,

ಮುಖ್ಯ ಇಂಜಿನಿಯರ್(ವಿ),
ಬೆಂ.ಮ.ಕ್ಷೇ.ವ (ಉತ್ತರ), ಬೆವಿಕಂ,ಬೆಂಗಳೂರು.

ಪ್ರತಿಯನ್ನು:

1. ಅಧೀಕ್ಷಕ ಇಂಜಿನಿಯರ್(ವಿ), (ವಾ, ಕಾ&ಪಾ), ಬೆಂಗಳೂರು ಪೂರ್ವ ವೃತ್ತ, ಬೆಂಗಳೂರು,
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಶಿವಾಜಿನಗರ ವಿಭಾಗ ಇವರಿಗೆ, ಮಾಹಿತಿಗಾಗಿ ಕಳುಹಿಸಲಾಗಿದೆ.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) E-9 ಉಪವಿಭಾಗ ಇವರಿಗೆ ಮಾಹಿತಿಗಾಗಿ ಹಾಗು ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.
4. AEE-2/M.F/OC.